# ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)

## ಶಾಹಿ ಎಕ್ಸ್‌ಪೋರ್ಟ್ಸ್ ಕಾರ್ಮಿಕ ಸಂಗಾತಿಗಳೇ,

- ನೀವು ನಿಮ್ಮ ಕಾರ್ಖಾನೆಗೆ ಮಾಡಿಕೊಡಬೇಕಾದ ಕಾಂಪ್‌ಆಫ್ ಗಂಟೆಗಳು ಬಾಕಿ ಇದೆಯೇ?
- ಇದರ ಒತ್ತಡ ತಾಳಲಾರದೆ, ಇದರಿಂದ ತಪ್ಪಿಸಿಕೊಳ್ಳಲು ರಾಜೀನಾಮೆ ನೀಡುತ್ತಿದ್ದೀರಾ?
- ರಾಜೀನಾಮೆ ನೀಡಿದಾಗ ನಿಮ್ಮ ಸೆಟಲ್‌ಮೆಂಟ್‌ನಲ್ಲಿ ಈ ಗಂಟೆಗಳ ವೇತನವನ್ನು ಕಡಿತ ಮಾಡಿಕೊಳ್ಳುತ್ತಿದ್ದಾರೆಯೇ?

ಆಡಳಿತವರ್ಗದವರು ಈ ರೀತಿ ಕಾಂಪ್‌ಆಫ್ ಮಾಡಿಸುವುದು ಕಾನೂನು ಬಾಹಿರ ಹಾಗೂ ಕಾರ್ಮಿಕರಿಗೆ ಮಾಡುತ್ತಿರುವ ಅನ್ಯಾಯ. ಈ ಬಗ್ಗೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ದಿನಾಂಕ 03–05–2013 ರಂದು ಶಾಹಿ ಎಕ್ಸ್‌ಪೋರ್ಟ್ಸ್ ಕಾರ್ಖಾನೆಯ ಅಧ್ಯಕ್ಷರಿಗೆ ಮತ್ತು ಜನರಲ್ ಮ್ಯಾನೇಜರ್ (ಹೆಚ್.ಆರ್)ರವರಿಗೆ ಪತ್ರ ಬರೆದಿತ್ತು. ಇದಕ್ಕೆ ಉತ್ತರವಾಗಿ ತಮ್ಮ ಜನರಲ್ ಮ್ಯಾನೇಜರ್ (ಹೆಚ್.ಆರ್)ರವರು, "ನಮ್ಮ ಕಾರ್ಖಾನೆಯಲ್ಲಿ ಆ ರೀತಿ ನಡೆಯುತ್ತಿಲ್ಲ, ಆ ರೀತಿ ನಡೆಯಲು ನಾವು ಬಿಡುವುದಿಲ್ಲ" ಎಂದು ದಿನಾಂಕ 08–05–2013 ರಂದು ಇ.ಮೇಲ್ ಮೂಲಕ ತಿಳಿಸಿದ್ದಾರೆ.

ಆತ್ಮೀಯ ಸಂಗಾತಿಗಳೇ, ದಯವಿಟ್ಟು ಗಮನಿಸಿ,. . . ನಿಮ್ಮ ಕಾರ್ಖಾನೆಗಳಲ್ಲಿ . . . .

- ಕೆಲಸವಿಲ್ಲ ಎಂದು ಹೇಳಿ ನಿಮ್ಮನ್ನು ಬೇಗ ಮನೆಗೆ ಕಳುಹಿಸುವುದು, ಅಥವಾ ರಜೆ ಕೊಡುವುದು,
- ಆ ಕೆಲಸದ ಗಂಟೆಗಳನ್ನು ನಿಮ್ಮ ಖಾತೆಯಲ್ಲಿ ಜಮಾ ಮಾಡುವುದು,
- ಇದು ದಿನದಿಂದ ದಿನಕ್ಕೆ ಹೆಚ್ಚುತ್ತಾ ಕೆಲವು ಕಾರ್ಮಿಕರ ಖಾತೆಗಳಲ್ಲಿ 50 ರಿಂದ 150 ಗಂಟೆಗಳಷ್ಟು ಏರಿಕೆಯಾಗುವುದು,
- ಕೆಲಸದ ಒತ್ತಡ ಹೆಚ್ಚಿದಾಗ ಆ ಗಂಟೆಗಳ ಕೆಲಸವನ್ನು ಮಾಡಿಕೊಡಲೇಬೇಕೆಂದು ಬಲವಂತವಾಗಿ ನಿಮ್ಮನ್ನು ಬೆಳಗ್ಗೆ, ಸಂಜೆ ಹೆಚ್ಚು ಕೆಲಸ ಮಾಡಿಸುವುದು,
- ಕಾರ್ಮಿಕರು ಇದರ ಒತ್ತಡ ತಾಳಲಾರದೆ, ತಪ್ಪಿಸಿಕೊಳ್ಳಲು ರಾಜೀನಾಮೆ ಕೊಟ್ಟಾಗ, ಅವರಿಗೆ ಬರಬೇಕಾದ ಸೆಟಲ್‌ಮೆಂಟ್‌ನಲ್ಲಿ ಅಷ್ಟು ಗಂಟೆಗಳ ವೇತನವನ್ನು ಕಡಿತಗೊಳಿಸುವುದು

  ಇವೆಲ್ಲವೂ ಕಾನೂನು ಬಾಹಿರ ಹಾಗೂ ಕಾರ್ಮಿಕರಿಗೆ ಮಾಡುತ್ತಿರುವ ಅತ್ಯಂತ ಅನ್ಯಾಯವಾಗಿದೆ.

ಕಾರ್ಖಾನೆಯಲ್ಲಿ ದಿನಕ್ಕೆ 8 ಗಂಟೆಗಳೂ ಕೆಲಸವಿರುವಂತೆ ನೋಡಿಕೊಳ್ಳುವುದು ಕಾರ್ಖಾನೆಯ ಜವಾಬ್ದಾರಿಯಾಗಿರುತ್ತದೆ. ನೀವೆಂದೂ ಅದಕ್ಕೆ ಹೊಣೆಗಾರರಲ್ಲ. ಇಲ್ಲಿಯವರೆಗೂ ನಿಮ್ಮ ಖಾತೆಯಲ್ಲಿ ನೀವು ಕೆಲಸ ಮಾಡಿಕೊಡಬೇಕಾದ ಕಾಂಪ್‌ಆಫ್ ಗಂಟೆಗಳು ಬಾಕಿ ಉಳಿದಿದ್ದರೆ ಅದನ್ನು ನೀವು ಮಾಡಿಕೊಡುವ ಅಗತ್ಯವಿಲ್ಲ. ಮಾಡಿಕೊಡಲೇ ಬೇಕೆಂದು ಒತ್ತಾಯಿಸಿದರೆ ಈ ಕೆಳಗಿನ ವಿಳಾಸ ಅಥವಾ ಸಂಖ್ಯೆಯಲ್ಲಿ ಯೂನಿಯನ್‌ಗೆ ತಿಳಿಸಿ, ಮತ್ತು ಇನ್ನು ಮುಂದೆ ಈ ರೀತಿ ಆದಲ್ಲಿ ಅದನ್ನು ಪ್ರತಿಭಟಿಸಿ.

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**

ನಂ. 17/1, ಮೊದಲನೇ ಮಹಡಿ, ಹೊಸಗುಡ್ಡದ ಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560026, ಫೋನ್: 26745242

ನಂ.13. ಮುನೇಶ್ವರ ದೇವಸ್ಥಾನದ ಹತ್ತಿರ, 5ನೇ ಅಡ್ಡರಸ್ತೆ, ನೆಲಗೆದರನಹಳ್ಳಿ, ನಾಗಸಂದ್ರ ಪೋಸ್ಟ್, ಬೆಂ–560 073

ಮೊಬೈಲ್ ಸಂಖ್ಯೆಗಳು: 9686229761, 9844714476, 9901290495, 9880437877

Scanned with OKEN Scanner